tdps is relations

**TD Power Systems Limited**
(CIN -L31103KA1999PLC025071)

REGISTERED OFFICE & FACTORY:
27, 28 and 29, KIADB Industrial Area
Dabaspet, Nelamangala Taluk
Bengaluru Rural District
Bengaluru – 562 111 India

Tel +91 80 229 95700 / 6633 7700
Fax +91 80 7734439 / 2299 5718
Mail tdps@tdps.co.in

www.tdps.co.in

July 18, 2026

The Corporate Service Department
**BSE Limited**
P J Towers, Dalal Street
Mumbai - 400 001
Scrip Code: **533553**

The Listing Department
**The National Stock Exchange of India Ltd**.
Exchange Plaza, Bandra- Kurla Complex
Bandra (East)
Mumbai - 400 051
Symbol: **TDPOWERSYS**

Dear Sir/Mam,

**SUB: NEWSPAPER ADVERTISEMENT - NOTICE OF 27th ANNUAL GENERAL MEETING, E-VOTING & RECORD DATE**

Pursuant to Regulation 30 of SEBI (Listing Obligations and Disclosure Requirements) Regulations, 2015, we hereby enclose the copies of newspaper advertisement published in the following newspapers:

a) Business Line (English – All India Edition)
b) Eesanje (Bangalore Edition)

This is for your information and records.

Thanking you,
For **TD Power Systems Limited**

BHARAT RAJWANI
Digitally signed by BHARAT RAJWANI
Date: 2026.07.18 13:32:06 +05'30'

**Bharat Rajwani**
Company Secretary & Compliance Officer

Encl: A/a

## QUICKLY.

**Forex kitty rises $964 m to $675 b: RBI data**

**Mumbai:** The country's forex reserves jumped $964 million to $675.157 billion in the week ended July 10, the Reserve Bank said on Friday. In the previous reporting week, the overall kitty had jumped by $7.26 billion to $674.193 billion. For the week ended July 10, foreign currency assets, a major component of the reserves, increased by $930 million to $546.508 billion, the central bank's data showed. PTI


**Manipal Hospitals to cut valuation to $8.3 b in IPO**

Manipal Health Enterprises, operator of the Manipal Hospitals chain, is seeking a lower valuation of about ₹80,000 crore ($8.3 billion) in its planned initial public offering, according to people familiar with the matter. The Temasek Holdings Pte-backed company is planning to raise as much as ₹11,000 crore through a share sale that's likely to be launched in the week starting July 27, the people said. The targeted valuation is below the $10-12 billion marketed range floated in April. BLOOMBERG

# 'Role of IT services will become more important in the AI age'

**LEVERAGING TECH.** AI is no longer just a productivity tool at the edge of the enterprise, says TechM Chairman

**Vallari Sanzgiri**
Mumbai




IT services will play a more important role in making AI usable, trusted and valuable within enterprises, said Anand Mahindra, Tech Mahindra Chairman, during the company's annual general meeting on Friday.

"Let me tackle the elephant in the room — which is the prediction that the rise of artificial intelligence will kill IT services in India. Every major technology cycle creates such anxieties. My answer is clear. The role of IT services will not diminish. It will change. In many ways, it will become more important. AI is no longer just a productivity tool at the edge of the enterprise," said Mahindra.

While agreeing that AI has moved to the centre of business design work, customers service, risk management and decision-making, Mahindra argued that companies would still require IT companies to integrate, govern and shape the technology as per every enterprise's requirements.

"Most enterprises operate with legacy systems, fragmented data, complex regulations and technology debt. AI cannot be simply placed on top of this complexity. That is why companies like ours matter: to ensure AI is usable, trusted and valuable inside the enterprise," said Mahindra.

Tech Mahindra will provide an enabling layer in the AI era, turning a very powerful technology into an intelligent business partner that delivers real value, he said.

"AI will challenge old models, but it will also create one of the largest opportunities our industry has ever seen which is to help enterprises and nations convert intelligence into trusted impact," said Mahindra.

**SOVEREIGN MODEL**

On sovereign models, Mahindra recently emphasised the importance of such models as enterprises will increasingly need the ability to work across models.

However, the differentiating factor would be Tech Mahindra's ability to preserve company workflows and solutions along with the AI. "Some models may become more interchangeable over time. What will truly differentiate an enterprise is its own 'alpha' as it's known— which is its data, workflows, judgment and domain knowledge. And our role at Tech Mahindra is to help preserve that alpha through the platforms, the solutions and workflows that sit above and around the model," he said.

Stating that clients will need partners who understand AI transformation beyond as a business, talent and operating model transformation, the Chairman said that the enterprise of tomorrow will be built on human judgment amplified by AI capability.

"Tech Mahindra is ready for that opportunity. Our ambition is simple: to help our clients thrive in the AI era, and to ensure that India is not left behind," said Mahindra.

# Chabahar port terminal has not faced damage after US strikes: MEA

**Amiti Sen**
New Delhi


India's Chabahar project is strategically important as it provides access to Afghanistan and Central Asia

India has said the Chabahar port terminal in Iran has not suffered any damage despite reports of US strikes in the region, while confirming that discussions are underway with relevant stakeholders on the future of operations after the expiry of a US sanctions waiver.

Responding to reports that the port had come under attack, Ministry of External Affairs (MEA) spokesperson Randhir Jaiswal said on Friday that the Shahid Beheshti terminal, which is operated by India, remained unaffected.

"We have seen some reports. But we can tell you that the terminal itself did not face any damage," Jaiswal said.

**THE SPECULATION**

The clarification came after US Defence Secretary Pete Hegseth shared an image on social media platform X appearing to show the collapse of a tower at Chabahar following American strikes, with the caption, "Iran does not control the SoH" — an apparent reference to the Strait of Hormuz. The post fuelled speculation over the extent of damage to the port.

Jaiswal also said India was engaging with stakeholders on the future of the project after the lapse of the US sanctions waiver that had allowed New Delhi to continue work at the port.

"There was a waiver given by the US side. That waiver got over some time back. Post that, we have been in discussions with relevant stakeholders on how to take this forward," he said.

The remarks come amid heightened tensions in the region following US military action against Iran, raising concerns over the safety of critical infrastructure and key trade routes.

**KEY PROJECT**

India's Chabahar project is strategically important as it provides access to Afghanistan and Central Asia while bypassing Pakistan. India Ports Global Ltd (IPGL), a government-owned company, operates the Shahid Beheshti terminal under a long-term agreement with Iran.

The project is also a key component of India's connectivity strategy through the International North-South Transport Corridor (INSTC), aimed at improving trade links with Central Asia, Russia and Europe.

# DRIVN partners JBM, Purple for ₹900-crore intercity EV push

**Amit Vijay Mohile**
Mumbai


**GREEN DRIVE.** Saurabh Patwardhan, Director, Purple Mobility, and Alpna Jain, Co-Founder and Chief Business Officer of DRIVN

Commercial EV leasing platform DRIVN will finance the acquisition and deployment of 600 electric buses through partnerships with JBM Electric Vehicles and Purple Bus, creating an estimated ₹900-crore pipeline as it seeks to remove the upfront-capital barrier slowing the electrification of India's intercity transport market.

The programme comprises 500 buses to be procured from JBM and another 100 to be deployed with Purple. At an average price of ₹1.5 crore, the JBM order is estimated at ₹750 crore and the Purple fleet at ₹150 crore. The value could vary as Purple is considering 12- and 13.5-metre buses costing ₹1.4-1.65 crore, depending on their configuration.

"The success of commercial electric mobility depends on bringing together manufacturing, operations, technology and financing," Alpna Jain, Co-founder and Chief Business Officer of DRIVN, told *businessline*.

"With 600 buses planned under these two partnerships, we are creating a connected model where financing, charging infrastructure and fleet performance are aligned with real operational data rather than projections," she added.

DRIVN will acquire and own the vehicles before leasing them to operators under long-term arrangements. Its model combines vehicle financing with charging-infrastructure planning, maintenance, fleet monitoring and battery lifecycle management, allowing operators to expand without committing substantial upfront capital.

Purple Mobility Director Saurabh Patwardhan said the 100 buses would provide the scale required to build charging infrastructure, understand the technology and stabilise unit economics.

"The transition to electric buses requires a fundamentally different financing approach from conventional ICE fleets. Our partnership with DRIVN gives us access to timely, scalable capital, which is critical for building route density and expanding our EV operations profitably across India," Patwardhan told *businessline*.

**DAILY SCHEDULES**

Purple, which operates more than 1,200 vehicles across 85 cities, expects the first buses to be deployed next month. It has signed a letter of intent with Switch Mobility for around 40 buses to be drawn down over six months and is evaluating JBM and VE Commercial Vehicles for subsequent batches.

Around 60-70 per cent of the fleet will be seaters, with sleeper and sleeper-seater configurations accounting for the balance. The buses will initially operate on eight to 10 routes of less than 350 km, allowing them to complete schedules without intermediate charging. Purple expects the fleet to undertake 150 daily schedules.

It plans to expand its intercity electric fleet to 400-500 buses over the next two to three years. Purple has identified 52 potential routes that could eventually support 700-750 buses.

**JBM'S PACT**

DRIVN's JBM agreement covers the deployment of 500 buses across India over the next year, initially focusing on luxury intercity coaches before potentially expanding into employee mobility, school transportation and airport transit.

"By integrating our advanced electric-bus technology with DRIVN's leasing and financing platform, the partnership is designed to address capital barriers and enable a more sustainable, asset-light transition for fleet operators and corporates," JBM Electric Vehicles Chairman Nishant Arya said.

JBM offers intercity, city, staff and school buses and says its integrated Delhi-NCR manufacturing facility has annual capacity of 20,000 buses.

**ZINGBUS EXPANSION**

Separately, intercity mobility platform zingbus has signed agreements with 50 regional operators to facilitate the deployment of more than 200 zingbus Maxx and electric buses over the next 12 months, strengthening its presence across South and West India.

The 200-plus target covers both premium Maxx coaches and electric buses; zingbus has not disclosed the EV share. It plans to introduce more than 50 electric buses in 2026 and scale its electric fleet to 1,000 by 2030. The initial rollout will cover corridors connecting Bengaluru, Hyderabad, Chennai, Pune, Mumbai and Goa.

# Section of MRF workers at Perambalur factory on strike

**Our Bureau**
Chennai

A group of workers at tyre manufacturing major MRF's Perambalur Factory are on strike since July 3 demanding a long-pending wage settlement, *businessline* has learnt.

Centre of Indian Trade Unions (CITU) representatives, who are part of the strike, said that a previous wage agreement expired in 2024, and workers have gone without wage revision since then.

The union has submitted a charter of demands, and various of rounds of conciliation talks have been held before Labour Commissioners, but there has been no clarity on a new agreement, they said.


The strike is said to involve a few hundred permanent workers and the management is said to have suspended a few since the strike began, terming the strike illegal.

Production at the plant is said to be continuing with the help of temporary workers and apprentices.

MRF did not respond to *businessline's* queries.

# China pitches AI order for Global South

**Ananth Krishnan**
Beijing


**AI GOVERNANCE.** Chinese President Xi Jinping and Cambodia's Prime Minister Hun Manet on the sidelines of the World Artificial Intelligence Conference in Shanghai REUTERS

It is the clearest signal yet of China's global leadership ambitions in artificial intelligence (AI).

On Friday, Chinese President Xi Jinping unveiled a new initiative on global AI governance, pitched largely at the Global South and developing countries. China, along with 29 other countries mostly from Asia, Africa and Latin America, has established a World Artificial Intelligence Cooperation Organisation (WAICO) based in Shanghai.

Xi described the effort as "a major move by China to answer the call of the Global South and unite the international community together to promote vigorously AI development and governance".

"It will be an important milestone in the history of AI development," he told a summit on AI governance in Shanghai. He announced that in the next five years, China would provide developing countries "with 5,000 opportunities in AI training and seminar programmes", as well as set up joint AI application co-operation centres with Asean, the League of Arab States, the African Union, the Community of Latin American and Caribbean States, the Shanghai Cooperation Organisation and BRICS.

**ALTERNATIVE MODELS**

The broader context is China's push to develop its alternatives to Western AI models and to offer them to developing countries.

Beijing is concerned about the security implications of relying on models based in the West, such as OpenAI's ChatGPT and Anthropic's Claude.

Xi hinted at these concerns in his speech, saying countries "should jointly oppose overstretching the national security concept in the field of AI and placing one country's security over that of others".

He did not name the US, but Chinese officials have previously hit out at Washington for what they have described as securitisation of technologies, including AI.

**MOONSHOT LAUNCH**

A day before the launch of WAICO, Chinese AI firm Moonshot announced its latest Kimi K3 model that has surprised Western analysts with its capabilities.

Chinese companies like Moonshot and DeepSeek are offering open-source models, which Beijing sees as giving them an edge n developing countries seeking technology for AI adoption. Xi said China would "encourage open source, openness, collaboration and sharing."

If security implications of using Western AI models are one concern, ideology is another. Chinese officials have also spoken of what they see as an "infiltration" of Western values through AI platforms and an erosion of sovereignty. This is a message that, Beijing believes, will find resonance in many developing countries and in the Global South.

"We should tend to the garden of civilisations with great care to ensure that the beauty of each civilisation is appreciated and shared," Xi said. "We often say in China: 'A single string cannot make music, and a single tree does not make a forest.' AI development should not be a solo performance by a single country, but a symphony of international co-operation."

Among the nations signed on to WAICO are Brazil, Russia, South Africa, Indonesia, Kazakhstan, Kenya, Malaysia, Pakistan, Uzbekistan and Venezuela.

India is alone among the five founding BRICS countries in its absence, and will have to grapple with China's plans to broaden the initiative in BRICS and SCO, organisations where India is a member.

# Maersk raises emergency surcharge on India-Europe shipments from Aug 1

**T E Raja Simhan**
Chennai

Global container shipping line Maersk has raised its emergency contingency surcharge (ECS) on cargo moving from the Indian subcontinent to North Europe, effective August 1, in a move that is expected to increase logistics costs for Indian exporters.

For cargo originating from South and East India — including Chennai, Kattupalli, Thoothukudi and Visakhapatnam — the ECS for shipments to North Europe will increase to $3,800 per 20-foot container (TEU) from $2,800. For cargo from North-West India, covering Mundra, Jawaharlal Nehru Port, Hazira and Pipavav, the surcharge will rise to $3,500 per TEU from $2,500.

The Danish major Maersk is one of the largest container shipping lines operating in India.

Industry sources said the surcharge hike comes at a time when India has concluded its free trade agreement with the UK and is nearing the finalisation of a trade pact with the European Union. Europe is a key export market for Indian products such as textiles, auto components, leather goods and pharmaceuticals.

They said the higher surcharge would raise overall logistics costs and other shipping lines are also expected to revise similar contingency charges to offset the higher risks and operating costs associated with current trade disruptions.

**FREIGHT COSTS**

N Thirukkumaran, Chairman of Tiruppur-based Esstee Exports India Ltd, said the revised ECS would effectively double freight costs for shipments to North Europe. "After the ECS, the freight for a TEU to North Europe will increase to about $6,400. Before the West Asia crisis, freight was around $1,700, which doubled over the last three months and will now rise sharply again because of the ECS," he said.

Sharmindar Saravanan, Managing Director of Chennai-based SSK Smart Move Logistics, said the increase would particularly hurt exporters operating on thin margins. "While large exporters may be able to absorb part of the increase, SMEs are likely to face greater pricing pressure in international markets," he said.

Vivek Raja of Pearl Shipping, Thoothukudi, said the higher ECS reflected continued operational challenges faced by container carriers, including network disruptions, longer voyage times, port congestion and higher operating expenses arising from ongoing uncertainty in the Gulf region. Although the ECS is only one component of total freight charges, it will increase overall shipping costs, particularly for low-margin commodities.

tdps®

**TD POWER SYSTEMS LIMITED**

CIN: L31103KA1999PLC025071
Registered Office: No. 27, 28 & 29, KIADB Industrial Area, Dabaspet, Nelamangala Taluk, Bengaluru Rural District, Bengaluru - 562 111
Tel. No.: + 91 80 22995700, Fax: + 91 80 22995718, E mail: tdps@tdps.co.in, Website: www.tdps.co.in

**NOTICE OF 27th ANNUAL GENERAL MEETING, REMOTE E-VOTING INFORMATION AND RECORD DATE**

NOTICE is hereby given that,

1. The 27th Annual General Meeting (AGM) of the Members of the Company will be held at 2.00 pm on Wednesday, August 12, 2026 through Video conferencing (VC)/other Audio-Visual Means (OAVM) to transact the business as set out in the Notice of the AGM.
2. In compliance with the provisions of the Ministry of Corporate Affairs ('MCA') General Circular 3/2025 dated September 22, 2025 and the Circulars issued from time to time by Securities and Exchange Board of India (SEBI) (hereinafter collectively referred to as "the Circulars") and in compliance with the provisions of the Companies Act, 2013 ("The Act") and the SEBI (Listing Obligations and Disclosure Requirements) Regulations, 2015 ("Listing Regulations"), the 27th AGM of the Company is being conducted on August 12, 2026 at 2:00 p.m. (IST) through Video Conferencing (VC)/Other Audio Visual Means (OAVM) Facility, which does not require physical presence of members at a common venue
3. The Notice of AGM and Annual Report for Fiscal 2026 have been emailed on July 17, 2026, to those members whose email IDs are registered with the Company/Depository Participant(s). The same are also available on the website of the Company at www.tdps.co.in.
4. A letter providing the web-link, including the exact path for accessing the Annual Report 2025-26 was dispatched on July 17, 2026, to Members who have not registered their e-mail Ids with the Company/RTA/ Depositories.
5. Pursuant to provisions of Section 108 of the Companies Act, 2013 and Rule 20 of the Companies (Management and Administration) Rules, 2014 as amended and Regulation 44 of SEBI (Listing Obligations and Disclosure Requirements) Regulations, 2015, the company is providing facility to its member holding shares either in physical form or dematerialized form, as on the cut-off-date August 05, 2026, for casting their vote on the business as set forth in the Notice of the AGM through the electronic voting system of Central Depository Services (India) Limited (CDSL). All the members are informed that:
   i. The business as set forth in the Notice of the 27th AGM may be transacted through voting by electronic means;
   ii. The remote e-voting shall **commence on Friday, August 07, 2026 (9.00 a.m. IST);**
   iii. The remote e-voting shall **end on Tuesday, August 11, 2026 (5.00 p.m. IST);**
   iv. The cut-off date for determining the eligibility to vote by electronic means or at the AGM is August 05, 2026;
   v. Any person, who becomes a member of the Company after dispatch of the Notice of the AGM and holding shares as of the cut-off date i.e August 05, 2026 may obtain the login ID and password by sending a request at helpdesk.evoting@cdslindia.com. However, if you are already registered with CDSL for e-voting, then the existing user ID and password/PIN can be utilized for casting vote;
   vi. Members may note that: a) the remote e-voting module shall be disabled by CDSL beyond 5.00 p.m. IST on August 11, 2026 and once the vote on a resolution is cast by the member, the member shall not be allowed to change it subsequently; b) Members may cast their vote by remote e-Voting prior to the date of AGM and members participating at the AGM, who have not cast their vote by remote e-Voting, will also be provided the facility for voting through electronic voting system during the AGM. c) The members who have cast their vote by remote e-voting prior to the AGM may also attend the AGM but shall not be entitled to cast their vote again; and d) a person whose name is recorded in the register of members or in the register of beneficial owners maintained by the depositories as on the cut-off date i.e., August 05, 2026, only, shall be entitled to avail facility of remote e-voting.
   vii. The Notice of AGM and Annual Report for the Fiscal 2026 is available on the Company's website **www.tdps.co.in/investor-relations/AnnualReport** and also at **https://www.evotingindia.com** Members who have not received the Notice and Annual Report for the Fiscal 2026 may download the same from the aforesaid website.
   viii. All grievances connected with the facility for voting by electronic means may be addressed by email to Mr. Rakesh Dalvi, Sr. Manager, Central Depository Services (India) Limited at the **helpdesk.evoting@cdslindia.com** or **rnt.helpdesk@in.mpms.mufg.com** our RTA at C101, 247 Park, L B S Marg, Vikhroli West, Mumbai 400 083.
6. Pursuant to Regulation 42 of SEBI (Listing Obligation and Disclosure Requirements) Regulations 2015, the Company has fixed the record date i.e. August 05, 2026, for the purpose of the 27th Annual General Meeting and determining the entitlement of the shareholders to the dividend for the year ended March 31, 2026.

**For TD Power Systems Limited**
Sd/-
**Bharat Rajwani**
**Company Secretary & Compliance Officer**

Place : Bengaluru
Date : July 17, 2026

# ಬೀದಿ ಬದಿ ವ್ಯಾಪಾರಿಗಳಿಗೆ ಪರ್ಯಾಯ ಸ್ಥಳ ಕಲ್ಪಿಸಲು ಒತ್ತಾಯ

**ತಿ.ನರಸೀಪುರ, ಜು.18-** ಪಟ್ಟಣದಲ್ಲಿ ಫುಟ್‌ಪಾತ್ ತೆರವು ಕಾರ್ಯಾಚರಣೆಯಿಂದ ಸಂಕಷ್ಟಕ್ಕೆ ಸಿಲುಕಿರುವ ರಸ್ತೆ ಬದಿ ವ್ಯಾಪಾರಿಗಳಿಗೆ ತಕ್ಷಣ ಪರ್ಯಾಯ ಸ್ಥಳ ಕಲ್ಪಿಸಿ, ಶಾಶ್ವತ ಮಾರುಕಟ್ಟೆ ನಿರ್ಮಿಸುವಂತೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ಪುರಸಭೆ ಮುಖ್ಯಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಪಟ್ಟಣದಲ್ಲಿ ದಿನನಿತ್ಯ ರಸ್ತೆ ಬದಿಯಲ್ಲಿ ವ್ಯಾಪಾರ ನಡೆಸುತ್ತಿದ್ದ ನೂರಕ್ಕೂ ಹೆಚ್ಚು ಸಣ್ಣ ವ್ಯಾಪಾರಿಗಳು ಜೀವನೋಪಾಯ ಕಳೆದುಕೊಳ್ಳುವ ಆತಂಕದಲ್ಲಿದ್ದು, ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ಕುರುಬೂರು ಶಾಂತಕುಮಾರ್ ಅವರ ಬಳಿ ಮನವಿ ಮಾಡಿಕೊಂಡ ಹಿನ್ನೆಲೆಯಲ್ಲಿ ಅವರು ಸಂಘಟನೆಯ ಪದಾಧಿಕಾರಿಗಳೊಂದಿಗೆ ಪುರಸಭೆ ಮುಖ್ಯಾಧಿಕಾರಿ ಶ್ರೀನಿವಾಸ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು.

ಈ ವೇಳೆ ವ್ಯಾಪಾರಿಗಳ ಜೀವನೋಪಾಯಕ್ಕೆ ಧಕ್ಕೆಯಾಗದ ರೀತಿಯಲ್ಲಿ ತಕ್ಷಣ ಪರ್ಯಾಯ ಸ್ಥಳವನ್ನು ಗುರುತಿಸಿ ವ್ಯಾಪಾರಕ್ಕೆ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಲಾಯಿತು.



**ಭರವಸೆ:** ಮನವಿಗೆ ಸ್ಪಂದಿಸಿದ ಪುರಸಭೆ ಮುಖ್ಯಾಧಿಕಾರಿ ಶ್ರೀನಿವಾಸ್, ಸದ್ಯಕ್ಕೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಎದುರಿನ ಖಾಸಗಿ ನಿವೇಶನದಲ್ಲಿ ಕೆಲವರಿಗೆ ಹಾಗೂ ಲಿಂಕ್ ರಸ್ತೆಯ ಮಧ್ಯಭಾಗದಲ್ಲಿರುವ ಪಿಟೀಲು ಚೌಡಯ್ಯ ಭವನದ ಆವರಣದಲ್ಲಿ ಕೆಲವರಿಗೆ ತಾತ್ಕಾಲಿಕವಾಗಿ ವ್ಯಾಪಾರ ನಡೆಸಲು ಅವಕಾಶ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಇದರ ಜೊತೆಗೆ ಸುಮಾರು 150 ಮಂದಿ ರಸ್ತೆ ಬದಿ ವ್ಯಾಪಾರಿಗಳಿಗೆ ಅನುಕೂಲವಾಗುವಂತೆ ಪಿಟೀಲು ಚೌಡಯ್ಯ ನಿವೇಶನದ ಎದುರು ಸುವ್ಯವಸ್ಥಿತ ಶಾಶ್ವತ ಮಾರುಕಟ್ಟೆ ನಿರ್ಮಿಸಲಾಗುವುದು. ಕಾಮಗಾರಿ ತುರ್ತಾಗಿ ಆರಂಭಿಸಲಾಗಿದ್ದು, 15 ದಿನಗಳಲ್ಲಿ ಸ್ಥಳ ಹಂಚಿಕೆ ಮಾಡುವ ಹಾಗೂ ಒಂದು ತಿಂಗಳೊಳಗೆ ಮಾರುಕಟ್ಟೆ ವ್ಯವಸ್ಥೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಎಂದು ಭರವಸೆ ನೀಡಿದರು.

ಅಲ್ಲಿಯವರೆಗೆ ಮುಖ್ಯ ರಸ್ತೆಯಲ್ಲಿ ಪಾದಚಾರಿಗಳಿಗೆ ತೊಂದರೆಯಾಗದಂತೆ ಪಿಟೀಲು ಚೌಡಯ್ಯ ಕೆರೆಯ ಅಂಗಳದಲ್ಲಿ ಸಣ್ಣ ಗಾಡಿ ವ್ಯಾಪಾರ ನಡೆಸಲು ಅವಕಾಶ ನೀಡಲಾಗಿದೆ ಎಂದು ತಿಳಿಸಿದರು.

ಬಳಿಕ ಮಾತನಾಡಿದ ಕುರುಬೂರು ಶಾಂತಕುಮಾರ್, ರಸ್ತೆ ಬದಿಯ ವ್ಯಾಪಾರದಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ಸಮಸ್ಯೆ ಉಂಟಾಗುತ್ತಿತ್ತು. ಈಗ ಪುರಸಭೆ ಬಡ ವ್ಯಾಪಾರಿಗಳ ಹಿತವನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಪರ್ಯಾಯ ಸ್ಥಳವನ್ನು ಗುರುತಿಸಿರುವುದು ಸ್ವಾಗತಾರ್ಹ ಎಂದು ಹೇಳಿದರು.

ಸಭೆಯಲ್ಲಿ ರೈತ ಮುಖಂಡರಾದ ಕಿರಗಸೂರು ಶಂಕರ್, ಅತ್ತಹಳ್ಳಿ ದೇವರಾಜ್, ಗುರುಸ್ವಾಮಿ, ವಾಚ್ ಕುಮಾರ್, ತರಕಾರಿ ನಿಂಗರಾಜು,ಕುರುಬೂರು ಸಿದ್ದೇಶ್, ಪ್ರಸಾದ್ ನಾಯಕ್, ಪ್ರದೀಪ್ ಸೇರಿದಂತೆ ಫುಟ್‌ಪಾತ್ ವ್ಯಾಪಾರಿಗಳು ಹಾಗೂ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಚೌಡೇಶ್ವರಿ ದೇಗುಲದಲ್ಲಿ ಆಷಾಢ ಪೂಜೆ



**ಬೇಲೂರು,ಜು.18-** ಪಟ್ಟಣದ ದೇವಾಂಗ ಬೀದಿಯಲ್ಲಿರುವ ಶ್ರೀ ಚೌಡೇಶ್ವರಿ ಅಮ್ಮನವರ ದೇಗುಲದಲ್ಲಿ ಆಷಾಢ ಮಾಸದ ಮೊದಲ ಶುಕ್ರವಾರದ ವಿಶೇಷ ಪೂಜೆಯನ್ನು ಭಕ್ತರ ಸಮ್ಮುಖದಲ್ಲಿ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ಶ್ರೀ ಚೌಡೇಶ್ವರಿ ಅಮ್ಮನವರಿಗೆ ವಿವಿಧ ಪುಷ್ಪ ಹಾಗೂ ಹಣ್ಣುಗಳಿಂದ ವಿಶೇಷ ಅಲಂಕಾರ ಮಾಡಲಾಗಿತ್ತು. ಬೆಳಗ್ಗೆಯಿಂದಲೇ ನೂರಾರು ಭಕ್ತರು ದೇವಾಲಯಕ್ಕೆ ಆಗಮಿಸಿ ದೇವರ ವಿಶೇಷ ಪೂಜೆಯಲ್ಲಿ ಪಾಲ್ಗೊಂಡು ದೇವಿಯ ದರ್ಶನ ಪಡೆದರು.ಮಹಿಳೆಯರು ದೇವಿಗೆ ಬಾಗಿನ ಅರ್ಪಿಸಿ, ಮಂಗಳಾರತಿ ಬೆಳಗಿ ಸುಖ ಸಮೃದ್ಧಿಗಾಗಿ ಪ್ರಾರ್ಥಿಸಿದರು.

ಪೂಜಾ ಕಾರ್ಯಕ್ರಮದಲ್ಲಿ ಚೌಡೇಶ್ವರಿ ಮಹಿಳಾ ಭಜನಾ ಮಂಡಳಿಯ ಪದಾಧಿಕಾರಿಗಳು, ದೇಗುಲದ ಆಡಳಿತ ಮಂಡಳಿಯ ಸದಸ್ಯರು, ದೇವಾಂಗ ಸಮಾಜದ ಮುಖಂಡರು ಹಾಗೂ ಅಪಾರ ಸಂಖ್ಯೆಯ ಭಕ್ತರು ಭಾಗವಹಿಸಿದ್ದರು.

ಶ್ರೀ ಚೌಡೇಶ್ವರಿ ಅಮ್ಮನವರ ದೇಗುಲದ ಗೌರವಾಧ್ಯಕ್ಷ ಗಿರಿಯಪ್ಪ ಶೆಟ್ಟಿ ಮಾತನಾಡಿ, ಮಹಿಳಾ ಭಜನಾ ಮಂಡಳಿಯ ಪದಾಧಿಕಾರಿಗಳು, ಪ್ರತಿ ವರ್ಷ ಆಷಾಢ ಮಾಸದ ವಿಶೇಷ ಪೂಜೆಯನ್ನು ಶ್ರದ್ಧಾ-ಭಕ್ತಿಯಿಂದ ನಡೆಸಿಕೊಂಡು ಬರುತಿದ್ದಾರೆ. ಭಕ್ತರ ಸಹಕಾರದಿಂದ ಧಾರ್ಮಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸುತ್ತಿರುವುದು ಸಂತಸದ ವಿಷಯ ಎಂದರು.




**ಆಷಾಢ ಮಾಸದ ಮೊದಲನೇ ಶುಕ್ರವಾರದ ಅಂಗವಾಗಿ ಹುಣಸೂರು ನಗರದಲ್ಲಿರುವ ಶ್ರೀ ಮುತ್ತು ಮಾರಿಯಮ್ಮ ದೇವಸ್ಥಾನದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದ ವೇದಿಕೆಯಲ್ಲಿ ಚಲನಚಿತ್ರ ನಟ ಕುಮಾರ್ ಅರಸೇಗೌಡ ಅವರನ್ನು ದೇವಸ್ಥಾನ ಸಮಿತಿ ಅಧ್ಯಕ್ಷ ಎಚ್.ವೈ.ಮಹಾದೇವ್ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಗಾಯಕರಾದ ಸಿಂಗೇಶ್, ಗಜೇಂದ್ರ, ಶ್ರೀನಿವಾಸ್ ಇದ್ದರು.**

# 10.40 ಕೋಟಿ ವೆಚ್ಚದ ರಸ್ತೆ - ಬ್ರಿಡ್ಜ್ ಕಾಮಗಾರಿಗೆ ಚಾಲನೆ



**ನಂಜನಗೂಡು,ಜು.18-** ತಾಲೂಕಿನ ಉಪ್ಪಿನ ಹಳ್ಳಿ, ಯಡಿಯಾಲ ಗ್ರಾಮದಲ್ಲಿ ಬ್ರಿಡ್ಜ್ ನಿರ್ಮಾಣ, ದೇವೇಗೌಡನ ಪುರ ಗ್ರಾಮದಲ್ಲಿ ಮುಖ್ಯರಸ್ತೆ ಅಭಿವೃದ್ಧಿ ಕಾಮಗಾರಿದಂತೆ ಒಟ್ಟು 10 ಕೋಟಿ 40 ಲಕ್ಷ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ ಧ್ರುವನಾರಾಯಣ್ ಹೇಳಿದರು.

ತಾಲೂಕಿನ ಉಪ್ಪಿನ ಹಳ್ಳಿ, ಯಡಿಯಾಲ ದೇವೇಗೌಡನ ಪುರ ಗ್ರಾಮಗಳಲ್ಲಿ ಬ್ರಿಡ್ಜ್ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಅಡಿ ಕ್ಷೇತ್ರಕ್ಕೆ ಮಂಜೂರಾದ 50 ಕೋಟಿ ರೂಗಳಲ್ಲಿ 20 ಕೋಟಿ ರೂಗಳನ್ನು ಲೋಕೋಪಯೋಗಿ ಇಲಾಖೆಗೆ ನೀಡಲಾಗಿದೆ, ಇದರಿಂದ ಕಳೆದ 25 ವರ್ಷಗಳಿಂದ ನನೆಗುದಿಗೆ ಅನೇಕ ಗ್ರಾಮಗಳ ಮುಖ್ಯರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ ಎಂದರು.

ತಾಲೂಕಿನ ಹುರ- ಮಲ್ಲಹಳ್ಳಿ ಮಾರ್ಗವಾಗಿ ದೇಪೇಗೌಡನಪುರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯು ಕಳೆದ 25 ವರ್ಷಗಳಿಂದ ಸಂಪೂರ್ಣ ಹಾಳಾಗಿ ಸಂಚಾರಕ್ಕೆ ತೊಂದರೆಯಾಗಿತ್ತು, ಗ್ರಾಮಸ್ಥರ ಬೇಡಿಕೆಯಂತೆ 4 ಕೋಟಿ 98 ಲಕ್ಷ ವೆಚ್ಚದಲ್ಲಿ ಸುಮಾರು 3 ಕಿಮೀ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುವುದು, ಇದರಿಂದ ಗ್ರಾಮಸ್ಥರ ಸುಗಮ ರಸ್ತೆ ಸಂಚಾರಕ್ಕೆ ನೆರವಾಗಲಿದೆ ಎಂದು ಅವರು ಹೇಳಿದರು.

ಯಡಿಯಲ ಗ್ರಾಮವು ಕಾಡಂಚಿನ ಪ್ರದೇಶವಾಗಿರುವುದರಿಂದ ದಿನನಿತ್ಯ ಮಾನವ ಪ್ರಾಣಿ-ಸಂಘರ್ಷ ಹೆಚ್ಚಾಗಿತ್ತು, ಚುನಾವಣಾ ಪೂರ್ವದಲ್ಲಿ ನನ್ನ ತಂದೆ ಧ್ರುವನಾರಾಯಣ್ ನೀಡಿದ್ದ ಆಶ್ವಾಸನೆಯಂತೆ, ನಾನು ಶಾಸಕರಾದ ನಂತರ 14 ಕೋಟಿ ವೆಚ್ಚದಲ್ಲಿ ರೈಲ್ವೆ ಬ್ಯಾರಿಕೇಡ್ ಮತ್ತು ಮೆಸ್ ನಿರ್ಮಾಣ ಮಾಡುವ ಮೂಲಕ ಮಾನವ ಪ್ರಾಣಿ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಲ್ಪಿಸಲಾಗಿದೆ ಎಂದು ಅವರು ವಿವರಿಸಿದರು.

ಇನ್ನಷ್ಟು ಅಭಿವೃದ್ಧಿ ಕಾರ್ಯಗಳನ್ನು ನಡೆಸಲು ನನಗೆ ಸಹಕಾರ ಮತ್ತು ಸಮಯವನ್ನು ನೀಡಬೇಕು ಎಂದು ಅವರು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಕೆ.ಜಿ. ಮಹೇಶ್, ಶ್ರೀಕಂಠ ನಾಯಕ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ. ಮಾರುತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಎಸ್ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉಪ್ಪಿನಳ್ಳಿ ಶಿವಣ್ಣ, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಚಂದನ್ ಗೌಡ, ಅಕ್ರಮ ಸಕ್ರಮ ಸಮಿತಿ ಸದಸ್ಯ ಹಾಡ್ಯ ಜಯರಾಮ, ಮುಖಂಡರಾದ ಮಾದಪ್ಪ, ಕಳಲೆ ರಾಜೇಶ್, ಅಭಿನಂದನ್ ಪಟೇಲ್, ಕಗ್ಗಲಿಪುರ ಮಹದೇವು, ಲೋಕೋಪಯೋಗಿ ಇಲಾಖೆ ಎಇಇ ರಮೇಶ್, ಎಇ ಬಸವರಾಜು, ಶರತ್, ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

# ಗುರುಕುಲದಲ್ಲಿ ವ್ಯಕ್ತಿತ್ವ ವಿಕಸನಕ್ಕೆ ಒತ್ತು



**ಬೇಲೂರು,ಜು.18-** ಮೌಲ್ಯಾಧಾರಿತ ಶಿಕ್ಷಣಕ್ಕೆ ಮಾದರಿಯಾದ ಚನ್ನೇನಹಳ್ಳಿ ಶ್ರೀ ಸತ್ಯಸಾಯಿ ಗುರುಕುಲ ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ವಸತಿ, ಊಟದೊಂದಿಗೆ ವ್ಯಕ್ತಿತ್ವ ವಿಕಸನಕ್ಕೆ ಒತ್ತು ನೀಡಲಾಗುತ್ತಿದೆ ಎಂದು ಶ್ರೀ ಸತ್ಯಸಾಯಿ ಗುರುಕುಲದ ಅಧ್ಯಕ್ಷ ನವೀನ್ ಕುಮಾರ್ ಹೇಳಿದರು.

ತಾಲೂಕಿನ ಇಬ್ಬೀಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚನ್ನೇನಹಳ್ಳಿ ಶ್ರೀ ಸತ್ಯಸಾಯಿ ಗುರುಕುಲದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಖಾಸಗಿ ಶಾಲೆಗಳ ಪೈಪೋಟಿ ನಡುವೆ ಮೌಲ್ಯಾಧಾರಿತ ಶಿಕ್ಷಣದ ಮೂಲಕ ಗ್ರಾಮೀಣ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಕಾರ್ಯದಲ್ಲಿ ತೊಡಗಿದ್ದೇವೆ ಎಂದರು.

ಇದುವರೆಗೆ 438ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿದ್ದು, ಪ್ರಸಕ್ತ ವರ್ಷ 125 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇಲ್ಲಿ ಬಡಕುಟುಂಬಗಳ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, 6 ರಿಂದ 10ನೇ ತರಗತಿಯವರೆಗೆ ಉಚಿತ ಶಿಕ್ಷಣ ನೀಡಲಾಗುತ್ತಿದೆ. ಪಠ್ಯ ಶಿಕ್ಷಣದ ಜೊತೆಗೆ ಸಮಾಜಸೇವೆ, ಪರಿಸರ ಸಂರಕ್ಷಣೆ, ಕೃಷಿ, ವೇದ ಉಪನಿಷತ್ತುಗಳ ಅಧ್ಯಯನ, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗೂ ಆದ್ಯತೆ ನೀಡಲಾಗುತ್ತಿದೆ ಎಂದು ಅವರು ಹೇಳಿದರು.

ಗುರುಕುಲದ ಮಾಧ್ಯಮ ಕಾರ್ಯದರ್ಶಿ ಬಿ.ಕೆ. ಗಣೇಶ್ ಮಾತನಾಡಿ, ಸಂಸ್ಥೆಯ ಸ್ಥಾಪಕರಾದ ಮಡಿಯಾಲ ನಾರಾಯಣಭಟ್ಟರ ದೂರದೃಷ್ಟಿಯ ಫಲವಾಗಿ ಪ್ರಾರಂಭವಾದ ಗುರುಕುಲವು, ನಂತರ ಸದ್ಗುರು ಮಧುಸೂದನ ಸಾಯಿ ಅವರ ಮಾರ್ಗದರ್ಶನದಲ್ಲಿ ಮತ್ತಷ್ಟು ವಿಸ್ತಾರಗೊಂಡಿದೆ. ಆಧುನಿಕ ಶಿಕ್ಷಣದೊಂದಿಗೆ ಭಾರತೀಯ ಸಂಸ್ಕೃತಿ, ಆಧ್ಯಾತ್ಮಿಕ ಮೌಲ್ಯಗಳು ಹಾಗೂ ಮಾನವೀಯತೆಯನ್ನು ಬೆಳೆಸುವ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಲಾಗಿದೆ ಎಂದರು. ಈ ಸಂದರ್ಭ ಶ್ರೀ ಸತ್ಯಸಾಯಿ ಗುರುಕುಲದ ಶಿಕ್ಷಕರು, ದಾನಿಗಳು ಹಾಗೂ ವಿದ್ಯಾರ್ಥಿಗಳಿದ್ದರು.

# ಸ್ಟಾರ್ ಹೆಲ್ತ್ ಇನ್ಶುರೆನ್ಸ್‌ನಿಂದ ಚಿಕಿತ್ಸಾ ಸೌಲಭ್ಯ ವಿಸ್ತರಣೆ

**ಹಾಸನ,ಜು.18-** ದೇಶದ ಪ್ರಮುಖ ಆರೋಗ್ಯ ವಿಮೆ ಸಂಸ್ಥೆಗಳಲ್ಲಿ ಒಂದಾಗಿರುವ ಸ್ಟಾರ್ ಹೆಲ್ತ್ ಅಂಡ್ ಅಲೈಡ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್, ಕರ್ನಾಟಕದಲ್ಲಿ ಮಳೆಗಾಲದಲ್ಲಿ ಜನರನ್ನು ಕಾಡುವ ವಿವಿಧ ಬಗೆಯ ಕಾಯಿಲೆಗಳ ಚಿಕಿತ್ಸಾ ಸೌಲಭ್ಯವನ್ನು ವಿಸ್ತರಿಸಿದೆ.

ಈ ಉಪಕ್ರಮದ ಮೂಲಕ, ಪಾಲಿಸಿದಾರರಿಗೆ ಟಾಕ್ ಟು ಸ್ಟಾರ್ ಸೇವೆ ಹಾಗೂ ಮನೆ ಬಾಗಿಲಿನ ಆರೋಗ್ಯ ಸೇವೆ ಕಲ್ಪಿಸಿಕೊಡಲಾಗುತ್ತಿದೆ. ಇದರ ನೆರವಿನಿಂದ ಆರಂಭಿಕ ಹಂತದಲ್ಲೇ ಅಗತ್ಯ ವೈದ್ಯಕೀಯ ಸಲಹೆ ಮತ್ತು ಪರೀಕ್ಷೆಗಳ ನೆರವು ಒದಗಿಸಲಾಗುತ್ತಿದೆ. ಜೊತೆಗೆ, ಸಾರ್ವಜನಿಕರು ಸ್ಟಾರ್ ಹೆಲ್ತ್ ಕಸ್ಟಮರ್ ಆ್ಯಪ್ ಮೂಲಕ ದಿನದ 24 ಗಂಟೆ ಉಚಿತ ವರ್ಚುವಲ್ ವೈದ್ಯರ ಸಮಾಲೋಚನೆ ಪಡೆಯುವ ಅವಕಾಶವನ್ನೂ ಕಲ್ಪಿಸಲಾಗಿದೆ ಎಂದು ಕಂಪನಿಯ ಮುಖ್ಯಸ್ಥ ಆದಿತ್ಯ ಓಂಪ್ರಕಾಶ್ ಬಿಯಾನಿ ಹೇಳಿದ್ದಾರೆ. ಪಾಲಿಸಿದಾರರಿಗೆ ಅನಿಯಮಿತ ಟೆಲಿ ಸಮಾಲೋಚನೆಯಡಿ ಪಾಲಿಸಿ ಅವಧಿಯಲ್ಲಿ ಎಷ್ಟೇ ಬಾರಿ ಬೇಕಾದರೂ ದೂರವಾಣಿ ಅಥವಾ ಆನ್‌ಲೈನ್ ಮೂಲಕ ವೈದ್ಯರ ಸಲಹೆ ಪಡೆಯಬಹುದು. ಜ್ವರ ಅಥವಾ ಸೋಂಕಿನ ಆರಂಭಿಕ ಲಕ್ಷಣಗಳು ಕಂಡುಬಂದ ಕೂಡಲೇ ವೈದ್ಯಕೀಯ ಸಲಹೆ ಪಡೆಯಲು ಇದು ನೆರವಾಗುತ್ತದೆ. ಸಾರ್ವಜನಿಕರಿಗೆ ಉಚಿತ ವರ್ಚುವಲ್ ವೈದ್ಯರ ಸಮಾಲೋಚನೆಯೂ ಇರುತ್ತದೆ ಎಂದರು.

ಅಂತೆಯೇ ಪಾಲಿಸಿದಾರರು ಟಾಕ್ ಟು ಸ್ಟಾರ್ ಸೇವೆಯಡಿ 7200 222 333 ಸಂಖ್ಯೆಗೆ ಕರೆ ಮಾಡಿ ಮಾರ್ಗದರ್ಶನ ಪಡೆಯಬಹುದು. ನಗದು ರಹಿತ ಮನೆ ಬಾಗಿಲಿನ ಆರೋಗ್ಯ ಸೇವೆಯಡಿ ಅರ್ಹ ಪಾಲಿಸಿದಾರರಿಗೆ ಸ್ಟಾರ್ ಹೆಲ್ತ್ ಕ್ಯಾಷ್‌ಲೆಸ್- ಸೌಲಭ್ಯದ ಮೂಲಕ ಮನೆ ಬಾಗಿಲಿಗೇ ಆರೋಗ್ಯ ಸೇವೆ ಒದಗಿಸಲಾಗುತ್ತದೆ.

# ಕುಮಾರವ್ಯಾಸ ಈ ನಾಡಿನ ಸಾಂಸ್ಕೃತಿಕ ರಾಯಭಾರಿ



ಕಡೂರು,ಜು.18-ಕುಮಾರವ್ಯಾಸ ಈ ನಾಡಿನ ಸಾಂಸ್ಕೃತಿಕ ರಾಯಭಾರಿ, ಕುಮಾರವ್ಯಾಸ ಭಾರತದ ಕಥಾಮಂಜರಿಯಲ್ಲಿ ಪ್ರತಿಯೊಬ್ಬರ ಜೀವನದಲ್ಲೂ ಅಳವಡಿಸಿಕೊಳ್ಳಬೇಕಾದ ಹಲವು ಮಹತ್ವವಾದ ಹಾಗೂ ವಿಶೇಷವಾದ ಸತ್ವ ಅಡಗಿದೆ ಸಾಂಸ್ಕೃತಿಕವಾಗಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ ಎಂದು ತರೀಕೆರೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ವಿದುಷಿ, ಸುನಿತಾ ಕಿರಣ್ ತಿಳಿಸಿದರು.

ಚಿಕ್ಕಮಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಮೊರಾರ್ಜಿ ವಸತಿ ಶಾಲೆ, ಜೋಡಿ ಹೋಚಿಹಳ್ಳಿ ಇವುಗಳ ಸಂಯುಕ್ತ ಆಶ್ರಯದಲ್ಲಿ ಜರುಗಿದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಪಠ್ಯಧಾರಿತವಾದ ಕುಮಾರವ್ಯಾಸ ಭಾರತದ ಕಥಾ ಪ್ರಸಂಗದಲ್ಲಿ ಗಮಕ ವಾಚನ ಮತ್ತು ವ್ಯಾಖ್ಯಾನವನ್ನು ನೀಡಿ ಅವರು ಮಾತನಾಡಿದರು.

ಮಹಾಭಾರತದ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ನಮಗೆಲ್ಲರಿಗೂ ಕುಮಾರವ್ಯಾಸರು ಚಿತ್ರಿಸಿದ್ದಾರೆ. ಆ ಮೂಲಕ ಸಾಹಿತ್ಯದ ಕಂಪನ್ನು ಮನೆ ಮನೆಗೆ ತಲುಪಿಸುವ ಕಾರ್ಯವನ್ನು ಈ ಕೃತಿಯಿಂದ ಕಾಣಬಹುದಾಗಿದೆ ಎಂದು ತಿಳಿಸಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಸೂರಿ ಶ್ರೀನಿವಾಸ್ ಮಾತನಾಡಿ, ಮಕ್ಕಳಲ್ಲಿ ಸಂಸ್ಕಾರವನ್ನು ರೂಡಿಸಿಕೊಳ್ಳಬೇಕು ಗುರು ಹಿರಿಯರಿಗೆ ಗೌರವವನ್ನು ಕೊಡುವುದು ಅಕ್ಷರಶಃ ಪಾಲಿಸಬೇಕು ಆಗ ಈ ಸಮಾಜಕ್ಕೆ ಒಂದು ಉತ್ತಮವಾದ ಕೊಡುಗೆಯನ್ನು ನಾವು ನೀವು ನೀಡಲು ಸಾಧ್ಯವಿದೆ ಎಂದು ಅವರು ತಿಳಿಸಿದರು.

ಕಡೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚಿಕ್ಕನಲ್ಲೂರು ಎಸ್ ಪರಮೇಶ್ ಮಾತನಾಡಿ ಪ್ರತಿಯೊಬ್ಬರು ಕನ್ನಡ ನಾಡು ನುಡಿ ಭಾಷೆ ಸಲುವಾಗಿ ಅದನ್ನು ಉಳಿಸಲು ನಾವೆಲ್ಲರೂ ಪಣತೊಡಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಮುರಾರ್ಜಿ ವಸತಿ ಶಾಲೆಯ ಪ್ರಾಂಶುಪಾಲರಾದ ಗಿರೀಶ್ ಮಾತನಾಡಿ, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಲ್ಲಿ ಪಠ್ಯಧಾರಿತವಾದ ಕುಮಾರವ್ಯಾಸ ಭಾರತದ ಕಥಾಪ್ರಸಂಗವನ್ನು ಉಲ್ಲೇಖಿಸಿ ಕಾರ್ಯಕ್ರಮವನ್ನು ಆಯೋಜಿಸಿದ್ದು ತುಂಬಾ ಸಂತೋಷದ ಸಂಗತಿ ಎಂದು ತಿಳಿಸಿದರು.

ಕಸಾಪ ಮಹಿಳಾ ಘಟಕದ ಅಧ್ಯಕ್ಷರಾದ ಲತಾ ರಾಜಶೇಖರ್ ಪ್ರಸ್ತಾವಿಕವಾಗಿ ಮಾತನಾಡಿದರು. ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಪ್ರಾಂಶುಪಾಲರಾದ ಕೆ ಮಂಜಾನಾಯಕ್ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷರಾದ ಮಂಜುನಾಥ್ ಹಾಗೂ ಕನ್ನಡ ಜಾನಪದ ಪರಿಷತ್ತಿನ ತಾಲೂಕು ಘಟಕದ ಅಧ್ಯಕ್ಷರಾದ ಶೋಭಾ ಹಾಗೂ ಶಿಕ್ಷಕರಾದ ಗಿರೀಶ್, ಉದಯಕುಮಾರ್, ಕೆಂಚಪ್ಪ ಹೊನ್ನಪ್ಪ, ವೀಣಾ ಹಾಗೂ ಇನ್ನಿತರ ಶಿಕ್ಷಕರು ಉಪಸ್ಥಿತರಿದ್ದರು.

### ಎರಡು ಗುಂಪುಗಳ ನಡುವೆ ಮಾರಾಮಾರಿ

# ಕರ್ತವ್ಯ ನಿರತ ಪೊಲೀಸರ ಮೇಲೂ ಹಲ್ಲೆ

**ಬೇಲೂರು,ಜು.18-** ಪ್ರೇಮ ವಿವಾಹದ ಹಿನ್ನೆಲೆಯಲ್ಲಿ ಉಂಟಾದ ವೈಷಮ್ಯ ಯುವಕನೊಬ್ಬನನ್ನು ಅಪಹರಿಸಿ ಹಲ್ಲೆ ನಡೆಸಿದ ನಂತರ ಎರಡು ಗುಂಪುಗಳ ನಡುವೆ ಭಾರೀ ಮಾರಾಮಾರಿ ನಡೆಯುತಿದ್ದ ಸಂದರ್ಭ ಗಲಾಟೆ ನಿಯಂತ್ರಿಸಲು ತೆರಳಿದ ಪೊಲೀಸರ ಮೇಲೆಯೂ ಹಲ್ಲೆ ನಡೆದ ಘಟನೆ ಪಟ್ಟಣದ ಜೆ.ಪಿ. ನಗರದಲ್ಲಿ ನಡೆಯಿತು.

ತಾಲೂಕಿನಬಂಟೇನಹಳ್ಳಿ ಗ್ರಾಮದ ಸಾನಿಯಾ ಹಾಗೂ ಮುದಿಗೆರೆ ಗ್ರಾಮದ ಆಸಿಫ್ ಎಂಬುವವರು ಜುಲೈ 1ರಂದು ಪರಸ್ಪರ ಪ್ರೀತಿಸಿ ವಿವಾಹವಾಗಿದ್ದರು. ವಿವಾಹಕ್ಕೆ ರೋಷನ್ ಎಂಬಾತ ಕಾರಣನಾಗಿದ್ದಾನೆ ಎಂದು ಆರೋಪಿಸಿ ಸಾನಿಯಾ ಪೋಷಕರು ದೂರು ನೀಡಿದ್ದರು.

ಜತೆಗೆ ಪಟ್ಟಣದ ಜೆ.ಪಿ. ನಗರದಲ್ಲಿ ರೆಫ್ರಿಜರೇಟರ್ ರಿಪೇರಿ ಕೆಲಸ ಮಾಡುತ್ತಿದ್ದ ರೋಷನ್‌ನನ್ನು ಮಾತನಾಡಿಸಬೇಕೆಂದು ಹೇಳಿ ಇನೋವಾ ಕಾರಿನಲ್ಲಿ ಕರೆದುಕೊಂಡು ಹೋದ ಶಾಹಿಂ, ಮಹಮ್ಮದ್ ಆಸಿಂ, ಮಹಮ್ಮದ್ ಆಸಿಫ್ ಸೇರಿದಂತೆ ಶಿವಮೊಗ್ಗ ಮತ್ತು ಮಂಗಳೂರು ಮೂಲದ ಸುಮಾರು ಹತ್ತು ಜನರ ಗುಂಪು ನಾಗೇನಹಳ್ಳಿ ಸಮೀಪ ರೋಷನ್ ಮೇಲೆ ಹಲ್ಲೆ ನಡೆಸಿ ವಾಪಸ್ ಪಟ್ಟಣದ ಜೆ.ಪಿ ನಗರಕ್ಕೆ ಕರೆತಂದರು.

ಆ ವೇಳೆ ಸ್ಥಳದಲ್ಲಿದ್ದ ಯುವಕರು ಹಾಗೂ ಸ್ಥಳೀಯರು ಆಕ್ರೋಶಗೊಂಡು ಕಾರಿನಲ್ಲಿದ್ದವರ ಮೇಲೆ ಹಲ್ಲೆ ನಡೆಸಿದ್ದಾರೆ. ಇದರಿಂದ ಎರಡು ಗುಂಪುಗಳ ನಡುವೆ ತೀವ್ರ ಮಾರಾಮಾರಿ ನಡೆದಿದ್ದು, ಕೆಲಕಾಲ ಸ್ಥಳದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.

ಗಲಾಟೆ ನಡೆಯುತ್ತಿರುವ ಬಗ್ಗೆ ಮಾಹಿತಿ ಪಡೆದು ಸ್ಥಳಕ್ಕೆ ಹೋದ ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಿಸಲು ಮುಂದಾದ ಸಂದರ್ಭದಲ್ಲಿ ಪುಂಡರು ಪೊಲೀಸರ ಮೇಲೆಯೂ ಹಲ್ಲೆ ನಡೆಸಿದ್ದಾರೆ.

ಈ ಘಟನೆಯಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ರೇವಣ್ಣ, ಎಎಸ್‌ಐ. ಸೋಮಶೇಖರ್ ಗಾಯಗೊಂಡು ಚಿಕಿತ್ಸೆ ಪಡೆದಿದ್ದಾರೆ. ಅಲ್ಲದೆ ಎರಡು ಗುಂಪುಗಳ ನಡುವಿನ ಮಾರಾಮಾರಿಯಲ್ಲಿ ರೋಷನ್ ಸೇರಿದಂತೆ ಹಲವರು ಗಾಯಗೊಂಡಿದ್ದು, ಎಲ್ಲರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಗಲಾಟೆ ಸಂದರ್ಭದಲ್ಲಿ ಸ್ಥಳದಲ್ಲಿದ್ದ ಸಾರ್ವಜನಿಕರು ತಮ್ಮ ಮೊಬೈಲ್ ಫೋನ್‌ನಲ್ಲಿ ಘಟನೆಯ ವಿಡಿಯೊ ಚಿತ್ರೀಕರಿಸಿದ್ದ ಆಧಾರದ ಮೇಲೆ ಗಲಾಟೆಯಲ್ಲಿ ಭಾಗಿಯಾಗಿದ್ದ ಆರೋಪಿಗಳನ್ನು ಪೊಲೀಸರು ಬಂಧಿಸಿ ತನಿಖೆ ಮುಂದುವರಿಸಿದ್ದಾರೆ.

tdps

**ಟಿಡಿ ಪವರ್ ಸಿಸ್ಟಮ್ಸ್ ಲಿಮಿಟೆಡ್**

CIN: L31103KA1999PLC025071

ನೋಂದಾಯಿತ ಕಚೇರಿ: # 27, 28 & 29, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಡಾಬಸ್‌ಪೇಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ, ಬೆಂಗಳೂರು-562111

ಫೋ: + 91 80 22995700, ಫ್ಯಾಕ್ಸ್: + 91 80 22995718 ಇಮೇಲ್: tdps@tdps.co.in ವೆಬ್‌ಸೈಟ್: www.tdps.co.in

**27ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ, ದೂರಸ್ಥ ಇ-ಮತದಾನ ಮಾಹಿತಿ ಮತ್ತು ರೆಕಾರ್ಡ್ ದಿನಾಂಕ**

ಈ ಮೂಲಕ ಸೂಚನೆ ನೀಡಲಾಗಿದೆ,

1. ಕಂಪನಿಯ ಸದಸ್ಯರ 27ನೇ ವಾರ್ಷಿಕ ಸಾಮಾನ್ಯ ಸಭೆ (ಎಜಿಎಂ) ಬುಧವಾರ, ಆಗಸ್ಟ್ 12, 2026 ರಂದು ಮಧ್ಯಾಹ್ನ 2.00ಕ್ಕೆ, ಎಜಿಎಂನ ಸೂಚನೆಯಲ್ಲಿ ತಿಳಿಸಿರುವಂತೆ ವ್ಯವಹಾರವನ್ನು ವಹಿವಾಟು ಮಾಡಲು ವೀಡಿಯೊ ಕಾನ್ಫರೆನ್ಸಿಂಗ್ (ವಿಸಿ)/ ಇತರೆ ಆಡಿಯೋ-ವಿಷುಯಲ್ ಮೀನ್ಸ್ (ಒಎವಿಎಂ) ಮೂಲಕ ನಡೆಯಲಿದೆ.
2. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ('MCA') ಹೊರಡಿಸಿದ ಸಾಮಾನ್ಯ ಸುತ್ತೋಲೆ 3/2025 ಸೆಪ್ಟೆಂಬರ್ 22, 2025 ರಂದು ಮತ್ತು ಭಾರತೀಯ ಭದ್ರತಾ ಮತ್ತು ವಿನಿಮಯ ಮಂಡಳಿ (SEBI) ಕಾಲಕಾಲಕ್ಕೆ ಹೊರಡಿಸಿದ ಸುತ್ತೋಲೆಗಳ (ಇನ್ನು ಮುಂದೆ ಒಟ್ಟಾರೆಯಾಗಿ "ಸುತ್ತೋಲೆಗಳು" ಎಂದು ಕರೆಯಲಾಗುತ್ತದೆ) ಅನುಸಾರವಾಗಿ ಮತ್ತು ಕಂಪನಿಗಳ ಕಾಯ್ದೆ, 2013 ("ಕಾಯ್ದೆ") ಮತ್ತು SEBI (ಪಟ್ಟಿ ಮಾಡುವ ಬಾಧ್ಯತೆ ಮತ್ತು ಬಹಿರಂಗ ಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015 ("ಪಟ್ಟಿ ಮಾಡುವ ನಿಯಮಗಳು")ರ ನಿಬಂಧನೆಗಳ ಅನುಸಾರವಾಗಿ, ಕಂಪನಿಯ 27ನೇ ವಾರ್ಷಿಕ ಮಹಾಸಭೆಯನ್ನು ಆಗಸ್ಟ್ 12, 2026ರಂದು ಮಧ್ಯಾಹ್ನ 2:00 ಗಂಟೆಗೆ (IST) ವೀಡಿಯೊ ಕಾನ್ಫರೆನ್ಸಿಂಗ್ (VC)/ಇತರ ಆಡಿಯೋ ದೃಶ್ಯ ವಿಧಾನಗಳು (OAVM) ಸೌಲಭ್ಯದ ಮೂಲಕ ನಡೆಸಲಾಗುತ್ತಿದೆ, ಇದಕ್ಕೆ ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿಯ ಅಗತ್ಯವಿಲ್ಲ.
3. ಕಂಪನಿ/ಠೇವಣಿ ಭಾಗವಹಿಸುವವರೊಂದಿಗೆ ನೋಂದಾಯಿಸಲಾದ ಇಮೇಲ್ ಐಡಿಗಳನ್ನು ಹೊಂದಿರುವ ಸದಸ್ಯರಿಗೆ ಜುಲೈ 17, 2026ರಂದು ವಾರ್ಷಿಕ ಮಹಾಸಭೆಯ ಸೂಚನೆ ಮತ್ತು 2026ರ ಹಣಕಾಸು ವರ್ಷದ ವಾರ್ಷಿಕ ವರದಿಯನ್ನು ಇಮೇಲ್ ಮಾಡಲಾಗಿದೆ. ಕಂಪನಿಯ ವೆಬ್‌ಸೈಟ್ www.tdps.co.in ನಲ್ಲಿ ಲಭ್ಯವಿದೆ.
4. ಕಂಪನಿ/ಆರ್‌ಟಿಎ/ಠೇವಣಿಗಳಲ್ಲಿ ತಮ್ಮ ಇ-ಮೇಲ್ ಐಡಿಗಳನ್ನು ನೋಂದಾಯಿಸದ ಸದಸ್ಯರಿಗೆ 2025-26ರ ವಾರ್ಷಿಕ ವರದಿಯನ್ನು ಪ್ರವೇಶಿಸಲು ನಿಖರವಾದ ಮಾರ್ಗವನ್ನು ಒಳಗೊಂಡಂತೆ ವೆಬ್-ಲಿಂಕ್ ಅನ್ನು ಒದಗಿಸುವ ಪತ್ರವನ್ನು ಜುಲೈ 17, 2026 ರಂದು ಕಳುಹಿಸಲಾಗಿದೆ.
5. ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 108 ಮತ್ತು ಕಂಪನಿಗಳ ನಿಯಮ 20ರ ಪ್ರಕಾರ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014, ಕಂಪನಿಗಳು (ನಿರ್ವಹಣೆ ಮತ್ತು ಆಡಳಿತ) ತಿದ್ದುಪಡಿ ನಿಯಮಗಳು, 2015 ಮತ್ತು ನಿಯಮ 44ರ ಮೂಲಕ ತಿದ್ದುಪಡಿ ಮಾಡಲಾಗಿದೆ ಸೆಬಿ (ಪಟ್ಟಿ ಮಾಡುವ ಬಾಧ್ಯತೆ ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015, ಕಟ್-ಆಫ್ ದಿನಾಂಕವಾದ ಆಗಸ್ಟ್ 05, 2026 ಕಂಪನಿಯು ತನ್ನ ಸದಸ್ಯರಿಗೆ ಭೌತಿಕ ರೂಪದಲ್ಲಿ ಅಥವಾ ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸೌಲಭ್ಯವನ್ನು ಒದಗಿಸುತ್ತಿದೆ, ವಿದ್ಯುನ್ಮಾನವಾಗಿ ಮತ ಚಲಾಯಿಸಲು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (CDSL) ನ ಎಲೆಕ್ಟ್ರಾನಿಕ್ ವೋಟಿಂಗ್ ಸಿಸ್ಟಮ್ ಮೂಲಕ ಎಜಿಎಂ ನ ಸೂಚನೆಯಲ್ಲಿ ವಿವರಿಸಿದಂತೆ ವ್ಯವಹಾರದ ಎಲ್ಲ ಸದಸ್ಯರಿಗೆ ತಿಳಿಸಲಾಗಿದೆ:
   i. 27ನೇ ಎಜಿಎಂ ನ ಸೂಚನೆಯಲ್ಲಿ ತಿಳಿಸಿರುವಂತೆ ವ್ಯವಹಾರವನ್ನು ಎಲೆಕ್ಟ್ರಾನಿಕ್ ಮೂಲಕ ಮತದಾನದ ವಹಿವಾಟು ನಡೆಸಬಹುದು;
   ii. ದೂರಸ್ಥ ಇ-ಮತದಾನವು **ಶುಕ್ರವಾರ ಆಗಸ್ಟ್ 07, 2026 ರಂದು (ಬೆಳಿಗ್ಗೆ 9.00 a.m. IST) ಆರಂಭವಾಗುತ್ತದೆ;**
   iii. ದೂರಸ್ಥ ಇ-ಮತದಾನವು **ಮಂಗಳವಾರ ಆಗಸ್ಟ್ 11, 2026 ರಂದು (ಸಂಜೆ 5.00 p.m. IST) ಕೊನೆಗೊಳ್ಳುತ್ತದೆ;**
   iv. ಎಲೆಕ್ಟ್ರಾನಿಕ್ ವಿಧಾನದಿಂದ ಅಥವಾ ಎಜಿಎಂನಲ್ಲಿ ಮತ ಚಲಾಯಿಸುವ ಅರ್ಹತೆಯನ್ನು ನಿರ್ಧರಿಸಲು ಕಟ್-ಆಫ್ ದಿನಾಂಕ ಆಗಸ್ಟ್ 05, 2026;
   v. ಯಾವುದೇ ವ್ಯಕ್ತಿ, ಕಂಪನಿಯ ಷೇರುಗಳನ್ನು ಪಡೆದುಕೊಂಡರೆ ಮತ್ತು ಎಜಿಎಂನ ಸೂಚನೆ ರವಾನೆಯಾದ ನಂತರ ಕಂಪನಿಯ ಸದಸ್ಯರಾಗುತ್ತಾರೆ ಮತ್ತು ಕಟ್-ಆಫ್ ದಿನಾಂಕದಂದು ಷೇರುಗಳನ್ನು ಹೊಂದಿರುವವರು ಅಂದರೆ ಆಗಸ್ಟ್ 05, 2026 ರಲ್ಲಿ helpdesk.evoting@cdslindia.com ವಿನಂತಿಯನ್ನು ಕಳುಹಿಸುವ ಮೂಲಕ ಲಾಗಿನ್ ಐಡಿ ಮತ್ತು ಪಾಸ್ವರ್ಡ್ ಪಡೆಯಬಹುದು ಹಾಗೆಯೇ ನೀವು ಈಗಾಗಲೇ ಸಿಡಿಎಸ್‌ಎಲ್‌ನಲ್ಲಿ ಇ-ಮತದಾನಕ್ಕೆ ನೋಂದಾಯಿಸಿಕೊಂಡಿದ್ದರೆ, ಈಗಿರುವ ಬಳಕೆದಾರರ ಐಡಿ ಮತ್ತು ಪಾಸ್‌ವರ್ಡ್/ಪಿನ್ ಅನ್ನು ಮತ ಚಲಾಯಿಸಲು ಬಳಸಬಹುದು;
   vi. ಸದಸ್ಯರು ಇದನ್ನು ಗಮನಿಸಬಹುದು: a) ದೂರಸ್ಥ ಇ-ಮತದಾನ ಮಾಡ್ಯೂಲ್ ಅನ್ನು CDSL ನಿಂದ ಸಂಜೆ 5.00ಕ್ಕೆ (IST) ಆಗಸ್ಟ್ 11, 2026 ರಂದು ನಿಷ್ಕ್ರಿಯಗೊಳಿಸುತ್ತದೆ, ಮತ್ತು ಸದಸ್ಯರು ನಿರ್ಣಯದ ಮೇಲೆ ಮತ ಚಲಾಯಿಸಿದ ನಂತರ, ಅದನ್ನು ಬದಲಾಯಿಸಲು ಸದಸ್ಯರಿಗೆ ಅವಕಾಶ ನೀಡಲಾಗುವುದಿಲ್ಲ; b) ಸದಸ್ಯರು ತಮ್ಮ ಮತವನ್ನು ಎಜಿಎಂ ದಿನಾಂಕಕ್ಕಿಂತ ಮುಂಚಿತವಾಗಿ ದೂರಸ್ಥ ಇ-ಮತದಾನದ ಮೂಲಕ ಚಲಾಯಿಸಬಹುದು ಮತ್ತು ಎಜಿಎಂ ನಲ್ಲಿ ಭಾಗವಹಿಸುವ ಸದಸ್ಯರು, ದೂರಸ್ಥ ಇ-ಮತದಾನದ ಮೂಲಕ ಮತ ಚಲಾಯಿಸದಿರುವಾಗ, ಎಜಿಎಂ ವಿದ್ಯುನ್ಮಾನ ಮತದಾನದ ವ್ಯವಸ್ಥೆಯ ಮೂಲಕ ಮತದಾನದ ಸೌಲಭ್ಯವನ್ನು ಸಹ ಒದಗಿಸಲಾಗುವುದು c) ಎಜಿಎಂಗೆ ಮುಂಚಿತವಾಗಿ ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸಿದ ಸದಸ್ಯರು ಎಜಿಎಂಗೆ ಹಾಜರಾಗಬಹುದು ಆದರೆ ಮತ್ತೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ; d) ಸದಸ್ಯರ ರಿಜಿಸ್ಟರ್‌ನಲ್ಲಿ ಅಥವಾ ಠೇವಣಿದಾರರು ಕಟ್-ಆಫ್ ದಿನಾಂಕದಂದು ಅಂದರೆ ಆಗಸ್ಟ್ 05, 2026 ರಂದು ಮಾತ್ರ ನಿರ್ವಹಿಸಲ್ಪಡುವ ಲಾಭದಾಯಕ ಮಾಲೀಕರ ರಿಜಿಸ್ಟರ್‌ನಲ್ಲಿ ಹೆಸರು ದಾಖಲಾಗಿರುವ ವ್ಯಕ್ತಿ, ದೂರಸ್ಥ ಇ-ಮತದಾನದ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ.
   vii. 2026ರ ವಾರ್ಷಿಕ ಮಹಾಸಭೆಯ ಸೂಚನೆ ಮತ್ತು ವಾರ್ಷಿಕ ವರದಿಯನ್ನು ಕಂಪನಿಯ ವೆಬ್‌ಸೈಟ್ www.tdps.co.in/investor-relations/AnnualReport ಮತ್ತು https://www.evotingindia.com ನಲ್ಲಿ ಲಭ್ಯವಿದೆ. 2026ರ ಸೂಚನೆ ಮತ್ತು ವಾರ್ಷಿಕ ವರದಿಯನ್ನು ಸ್ವೀಕರಿಸದ ಸದಸ್ಯರು ಮೇಲಿನ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದು.
   viii. ಎಲೆಕ್ಟ್ರಾನಿಕ್ ವಿಧಾನದಿಂದ ಮತ ಚಲಾಯಿಸುವ ಸೌಲಭ್ಯದೊಂದಿಗೆ ಸಂಪರ್ಕ ಹೊಂದಿದ ಎಲ್ಲಾ ಕುಂದುಕೊರತೆಗಳನ್ನು ಇಮೇಲ್ ಮೂಲಕ ಕೇಂದ್ರೀಯ ಠೇವಣಿ ಸೇವೆಗಳ (ಭಾರತ) ಲಿಮಿಟೆಡ್ ನ ವ್ಯವಸ್ಥಾಪಕರಾದ ಶ್ರೀ ರಾಕೇಶ್ ದಾಲ್ವಿ ರವರಿಗೆ ಇಮೇಲ್ helpdesk.evoting@cdslindia.com ಅಥವಾ rnt.helpdesk@in.mpms.mufg.com ಅಥವಾ ನಮ್ಮ ಆರ್‌ಟಿಎನ ಸಿ 101, 247 ಪಾರ್ಕ್, ಎಲ್ ಬಿ ಎಸ್ ಮಾರ್ಗ್, ವಿಕ್ರೊಲಿ ವೆಸ್ಟ್, ಮುಂಬೈ 400 083 ತಿಳಿಸಬಹುದು.
6. ಸೆಬಿ (ಪಟ್ಟಿ ಮಾಡುವ ಬಾಧ್ಯತೆ ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು 2015ರ ನಿಯಮ 42ರ ಅನುಸಾರವಾಗಿ, ಕಂಪನಿಯು 27ನೇ ವಾರ್ಷಿಕ ಸಾಮಾನ್ಯ ಸಭೆಯ ಉದ್ದೇಶಕ್ಕಾಗಿ ಆಗಸ್ಟ್ 05, 2026ರ ದಾಖಲೆಯ ದಿನಾಂಕವನ್ನು ನಿಗದಿಪಡಿಸಿದೆ ಮತ್ತು ಮಾರ್ಚ್ 31, 2026ಕ್ಕೆ ಕೊನೆಗೊಂಡ ವರ್ಷದ ಲಾಭಾಂಶಕ್ಕೆ ಷೇರುದಾರರ ಹಕ್ಕನ್ನು ನಿರ್ಧರಿಸುತ್ತದೆ.

ಟಿಡಿ ಪವರ್ ಸಿಸ್ಟಮ್ಸ್ ಲಿಮಿಟೆಡ್ ಪರವಾಗಿ
ಸಹಿ/-
ಭರತ್ ರಜ್ವಾನಿ
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣೆ ಅಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : ಜುಲೈ 17, 2026

Ro.No.445